ಭೂಸುಧಾರಣಾ ಕಾನೂನಿನ್ವಯ ಹೆಚ್ಚುವರಿ ಜಮೀನಿನ ಘೋಷಣೆ ಹಾಗೂ ಹಂಚಿಕೆ

1005 (1677) ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ) : ಮಾನ್ಯ ಕಂದಾಯ ಹಾಗೂ ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭೂ ಸುಧಾರಣಾ ಕಾನೂನಿನ್ವಯ ಫಾರಂ ನಂ. 7 ಮತ್ತು 11 ರಲ್ಲಿ ಧಾರವಾಡ ಜಿಲ್ಲೆಯಲ್ಲಿ ಸಲ್ಲಿಸಿದ ಅರ್ಜಿಗಳ ಸಂಖ್ಯೆ ಎಷ್ಟು?

ಆ) ಈವರೆಗೂ ಎಷ್ಟು ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ? ಹಾಗೂ ಇನ್ನೂ ಎಷ್ಟು ಪ್ರಕರಣಗಳು ಭೂ ನ್ಯಾಯ ಮಂಡಲಿಗಳ ಮುಂದೆ ಬಾಕಿ ಇವೆ?

ಇ) ಉಚ್ಚ ನ್ಯಾಯಾಲಯದಲ್ಲಿ ಎಷ್ಟು ಪ್ರಕರಣಗಳು ಎಷ್ಟು ದಿವಸಗಳಿಂದ ಬಾಕಿ ಇವೆ? (ಅವುಗಳ ವಿವರಗಳನ್ನು ಒದಗಿಸುವುದು)

ಈ) ಫಾರಂ ನಂ. 11ರ ಪ್ರಕಾರ ಎಷ್ಟು ಭೂ ಮಾಲೀಕರು ಎಷ್ಟು ಎಕರೆಗಳು ಜಮೀನು ಹೆಚ್ಚು ಇವೆ ಎಂದು ಘೋಷಿಸಿದ್ದಾರೆ?

ಉ) ಆ ಭೂಮಿಯನ್ನು ಯಾರ್ಯಾರಿಗೆ ಹಂಚಲಾಗಿದೆ?

ಊ) ಭೂಸುಧಾರಣೆ ಕಾನೂನಿನನ್ವಯ ಹೆಚ್ಚುವರಿ ಭೂ ಮಾಲೀಕರು ಫಾರಂ ನಂ. 11ನ್ನು ಸಲ್ಲಿಸದೇ ಇರುವವರ ಬಗ್ಗೆ ಈವರೆಗೆ ಧಾರವಾಡ ಜಿಲ್ಲೆಯಲ್ಲಿ ಯಾವುದಾದರೂ ಕ್ರಮಗಳನ್ನು ಕೈಗೊಳ್ಳಲಾಗಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಫಾರಂ ನಂ. 7 ರಲ್ಲಿ 66733
ಫಾರಂ ನಂ. 11 ರಲ್ಲಿ 16971

ಆ) ಇತ್ಯರ್ಥವಾಗಿರುವ ಪ್ರಕರಣಗಳು ಬಾಕಿ
ಫಾರಂ ನಂ. 7 ರಲ್ಲಿ 66731 2
ಫಾರಂ ನಂ. 11 ರಲ್ಲಿ 16950 21

ಇ) ಉಚ್ಚ ನ್ಯಾಯಾಲಯದಲ್ಲಿ ಈ ಕೆಳಕಂಡ ಪ್ರಕರಣ ಬಾಕಿ ಇವೆ.

		ಫಾರಂ 7	ಫಾರಂ 11
1) 1979	21	15	6
2) 1980	36	11	25
3) 1981	06	04	02
4) 1982	56	35	21
5) 1987	04	04	00
6) 1988	09	07	02
7) 1990	130	126	04
8) 1991	677	670	07
	939	872	67

ಈ) ಹೆಚ್ಚುವರಿ ಜಮೀನು ಘೋಷಿಸಿದ ಪ್ರಕರಣಗಳು 717, ಹೆಚ್ಚುವರಿ ಎಂದು ಘೋಷಿಸಿದ ಕ್ಷೇತ್ರ 21244.1 ಎಕರೆ.

ಉ) ಹೆಚ್ಚುವರಿ ಎಂದು ನಿರ್ಧರಿಸಿದ ಕ್ಷೇತ್ರದ ಪೈಕಿ ಈ ಕೆಳಗಿನಂತೆ ವಿತರಿಸಲಾಗಿದೆ.

	ಸಂಖ್ಯೆ	ಕ್ಷೇತ್ರ (ಎಕರೆಗಳು)
1) ಪರಿಶಿಷ್ಟ ಜಾತಿ	1327	5164-09
2) ಪರಿಶಿಷ್ಟ ಜನಾಂಗ	29	76-15
3) ಇತರರು	1073	4412-10
4) ಕಲಂ 77(3) ರಂತೆ ಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸಿದ್ದು	18	1747-22
5) ಉಚ್ಚ ನ್ಯಾಯಾಲಯದ ತಡೆಯಾಜ್ಞೆಯಲ್ಲಿ ಒಳಗಾಗಿರುವ ಕ್ಷೇತ್ರ	-	9903.37
ಒಟ್ಟು	2447	21244-13

ಊ) ಇಂತಹ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ.

ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ

1006 (1678) ಶ್ರೀ ಮನೋಹರ್ ಐನಾಪುರ (ಬಳ್ಳಿಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಲಂಬಾಣಿ ತಾಂಡಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೇಯೆ?

ಆ) ಹಾಗಾದರೆ, ಈವರೆವಿಗೆ ಪರಿವರ್ತಿಸಿರುವ ತಾಂಡಗಳ ಸಂಖ್ಯೆ ಎಷ್ಟು?

ಇ) ಈ ಉದ್ದೇಶಕ್ಕಾಗಿ ನಿಗಧಿಪಡಿಸಿರುವ ಹೆಚ್ಚುವರಿ ಮೊತ್ತ ಎಷ್ಟು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಹೌದು.

ಆ) ಇಲ್ಲ. ಇನ್ನೂ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಪರಿವರ್ತನೆಗೆ ಹಣ ನಿಗಧಿಪಡಿಸುವ ಅಗತ್ಯವಿಲ್ಲ.